## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.353-2020 ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು | ಸ್ವಾಮಿಗೌಡ |
| ವಾಸ್ತವ್ಯ | ಇಲವಾಲ, ಮೈಸೂರು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 26-07-2024.** |

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಆರ್.ಎನ್ ವಕೀಲರಿಂದಃ**

ನನ್ನ ತಂದೆ ಮಾದೇಗೌಡ ತಾಯಿ ಪುಟ್ಟಮ್ಮ ಎಂದರೆ ಸರಿ. ನನ್ನ ತಂದೆ ಊರು ಮಲ್ಲಾರದಹುಂಡಿ ಎಂದರೆ ಸರಿ. ನನ್ನ ತಾಯಿ ಹುಚ್ಚಗಣ್ಣಿ ಗ್ರಾಮದವರು. ನನ್ನ ತಾಯಿಯ ತಂದೆ ಹೆಸರು ಸಿದ್ಧೇಗೌಡ ಎಂದರೆ ಸರಿ. ಸಿದ್ಧೇಗೌಡರಿಗೆ ಪುಟ್ಟಮ್ಮ ಮತ್ತು ಜೋಗಿಗೌಡ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ತಂದೆ ಮಾದೇಗೌಡರಿಗೆ ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಮಲ್ಲಾರದಹುಂಡಿ ಗ್ರಾಮದಲ್ಲಿ ಪಿತ್ರಾರ್ಜಿತ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ.

2. ವಾದಿ ಮಂಜುಳ ರವರು ನನ್ನ ಅಣ್ಣ ನಾಗೇಗೌಡರ ಮಗಳು ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಾತ ಸಿದ್ಧೇಗೌಡ ರವರು ನನ್ನ ತಾಯಿ ಪುಟ್ಟಮ್ಮ ರವರಿಗೆ ದಾನವಾಗಿ ನೀಡಿರುವ ಸ್ವತ್ತು ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತನ್ನು ನನ್ನ ತಾತ ಸಿದ್ಧೇಗೌಡ ಮತ್ತು ನನ್ನ ಮಾವ ಜೋಗಿಗೌಡ ರವರು ಸೇರಿ ನನ್ನ ತಾಯಿಯವರಿಗೆ ದಿ.13-06-1966 ರ ನೋಂದಾಯಿತ ದಾನ ಪತ್ರದ ಮುಖೇನ ನನ್ನ ತಾಯಿಯವರಿಗೆ ನೀಡಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತನ್ನು ನನ್ನ ತಾಯಿಯವರಿಗೆ ನೀಡಿದ ನಂತರ, ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯೂ ನನ್ನ ತಾಯಿಯವರ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ.

3. ನಾನು ಬಿ.ಇ.ಎಂ.ಎಲ್. ಕಾರ್ಖನೆಯಲ್ಲಿ ಸುಮಾರು 30 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಸಂಸಾರವು ಕೂರ್ಗಳ್ಳಿಯಲ್ಲಿ ವಾಸವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನಮ್ಮ ಊರಿಗೂ ಹೋಗಿ ಬಂದು ಮಾಡುತ್ತೇನೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಾಯಿಯವರ ಹೆಸರಿಗೆ ಬದಲಾವಣೆ ಆದ ನಂತರ ದಾವಾ ಷೆಡ್ಯೂಲ್ ಸ್ವತ್ತಿನ ವ್ಯವಹಾರವನ್ನು ವಾದಿಯವರ ತಂದೆಯವರಾದ ನಾಗೇಗೌಡ ರವರೇ ನೋಡಿ ಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯೂ ನನ್ನ ತಾಯಿಯವರ ಹೆಸರಿಗೆ ಬದಲಾವಣೆ ಆದ ನಂತರ ದಾವಾ ಷೆಡ್ಯೂಲ್ ಸ್ವತ್ತಿನ ವ್ಯವಸಾಯವನ್ನು ನಾಗೇಗೌಡ ರವರೇ ಮಾಡ್ತುದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ಒಳಗೊಂಡಂತೆ ನಮ್ಮ ಕುಟುಂಬದ ಸ್ವತ್ತುಗಳ ಬಾಬ್ತು ವಿಭಾಗ ಪತ್ರವಾಗಿರುತ್ತದೆ ಎಂದರೆ ಸರಿ. ಸದರಿ ವಿಭಾಗ ಪತ್ರವು ಸುಮಾರು 8–10 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ವಿಭಾಗ ಪತ್ರವು ನನ್ನ ಬಳಿ ಇರುತ್ತದೆ ಎಂದರೆ ಸರಿ. ನಾನು ನನ್ನ ಬಳಿ ಇರುವ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ವಿಭಾಗ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತು ನಿಮಗೆ ಬಂದಿರುತ್ತದೆ ಎಂದು ತಿಳಿಸಿದ್ದು, ಆ ಸಂಬಂಧ ನಿಮ್ಮ ಹೆಸರಿಗೆ ಖಾತಾ ಬದಲಾವಣೆ ಆಗಿದೆಯೇ ಎಂಬ ಪ್ರಶ್ನೆಗೆ ನನ್ನ ಹೆಸರಿಗೆ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತೇನೆ ಎಂದು ತೋರಿಸಲು ನನ್ನ ಬಳಿ ದಾಖಲಾತಿಗಳು ಇರುತ್ತವೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ಹೊರತುಪಡಿಸಿ ನಾನು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನನ್ನ ತಂದೆಯಿಂದ ನನಗೆ ಸುಮಾರು 0.12 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಅರ್ಧ ಎಕರೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪೋಟೋದಲ್ಲಿ ಕಾಣುತ್ತಿರುವ ಸ್ವತ್ತು ನನ್ನ ತಂದೆಯಿಂದ ನನಗೆ ಬಂದಿರು ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಬಂದ ಸ್ವತ್ತು ಎಂದು ನುಡಿಯುತ್ತಾರೆ.

5.ನಾನು ಮೈಸೂನಲ್ಲಿದ್ದಾಗ ನಾಗೇಗೌಡ ರವರು ಊರಿನಲ್ಲಿ ವಾಸವಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಕೆಲಸದಲ್ಲಿ ಇದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿ ನನ್ನ ಅಣ್ಣ ನಾಗೇಗೌಡ ರವರ ಜೊತೆ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಬ್ಬರು ಜೊತೆ ಇದ್ದ ಎಂದು ನುಡಿಯುತ್ತಾರೆ. ವಾದಿಯನ್ನು ಪುಟ್ಟಮ್ಮ ರವರು ಅವರ ಮೊಮ್ಮಗ ಮಂಜುನಾಥ್ ರವರೊಂದಿಗೆ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಿ.03-03-2018 ರಲ್ಲಿ ಪುಟ್ಟಮ್ಮ ರವರು ತನ್ನ ಮಗ ನಾಗೇಗೌಡ ರವರಿಗೆ ದಾವಾ ಷೆಡ್ಯೂಲ್ ಸ್ವತ್ತಿನ ಬಾಬ್ತು ಹಕ್ಕು ಖುಲಾಸೆ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೋಸದಿಂದ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾಗೇಗೌಡರ ರವರು ಹಕ್ಕು ಖುಲಾಸೆ ಪತ್ರವನ್ನು ಮೋಸದಿಂದ ಮಾಡಿರುತ್ತಾರೆ ಎಂದು ಯಾವುದೇ ನ್ಯಾಯಾಲಯದಲ್ಲಾದರೂ ಪ್ರಶ್ನಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಈ ಸಂಬಂಧ ಊರಿನಲ್ಲಿ ಪಂಚಾಯ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಂಚಾಯ್ತಿಗೆ ಮಲ್ಲಾರದಹುಂಡಿ ಮತ್ತು ಹುಚ್ಚಗಣ್ಣಿ ಗ್ರಾಮದವರು ಸೇರಿದ್ದು, ಅವರವುಗಳ ಪೈಕಿ ರಾಜು, ಸಿದ್ಧೇಗೌಡ ಮತ್ತು ಜೋಗಿಗೌಡ ರವರ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

6. ನನ್ನ ತಾಯಿ ಪುಟ್ಟಮ್ಮ ರವರು ನಾಗೇಗೌಡ ರವರಿಗೆ ದಾವಾ ಷೆಡ್ಯೂಲ್ ಸ್ವತ್ತಿನ ಬಾಬ್ತು ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುವ ವಿಚಾರ ನನ್ನ

ತಾಯಿಯವರ ಮರಣಾ ನಂತರ ನನಗೆ ಗೊತ್ತಾಯಿತು. ನನ್ನ ತಾಯಿಯವರು ಸುಮಾರು 4 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**